## 8

# ಗೊಲ್ಯಾತ

## ಧರ್ಮವಿರೋಧಿಯ ದುರ್ಬಲತನ

## (17:1-54)

ಆಕಿಲೆಸ್ ಎಂಬುವನು ಗ್ರೀಕ್ ಪೌರಾಣಿಕ ಕತೆಯ ಒಬ್ಬ ಶ್ರೇಷ್ಠ ನಾಯಕ. ಟ್ರೋಜಾನ್ ಯುದ್ಧದಲ್ಲಿ, ಗ್ರೀಸ್ ದೇಶವು ಟ್ರಾಯ್‌ನ್ನು ಸೋಲಿಸಿದಾಗ ಅವನು ಪ್ರಮುಖ ಪಾತ್ರವಹಿಸಿದನು. ಹೋಮರನು *The Iliad*ನಲ್ಲಿ ಅವನ ಕುರಿತು ವಿವರಣೆ ನೀಡಿ ದ್ದಾನೆ. ಅವನ ದೇಹವನ್ನು ಹಾನಿಯಿಂದ ರಕ್ಷಿಸಲು ಜನನದ ಸ್ವಲ್ಪ ಸಮಯದಲ್ಲೇ, ಅವನ ತಾಯಿಯು ಅವನನ್ನು ಸ್ಟಿಕ್ಸ್ ನದಿಯಲ್ಲಿ ಮುಳುಗಿಳಿಸಿದಳು. ಹಿಮ್ಮಡಿಯಿಂದ ಅವನನ್ನು ಹಿಡಿದುದ್ದರಿಂದ ದೇಹದ ಈ ಭಾಗವನ್ನು ನೀರು ಮುಟ್ಟಲಿಲ್ಲ. ಮತ್ತು ಅವನಲ್ಲಿ ಆ ಒಂದು ದುರ್ಬಲ ಸ್ಥಾನವಿತ್ತು. ಟ್ರೋಜಾನ ಯುದ್ಧದಲ್ಲಿ, ಪ್ಯಾರಿಸ್ ಎಸೆದ ವಿಷದ ಬಾಣವು ಆಕಿಲೆಸ್‌ನ ಹಿಮ್ಮಡಿಯಲ್ಲಿ ನೆಟ್ಟಿತು. ಆಕಿಲೆಸ್‌ನು ಆ ಗಾಯದಿಂದ ಮರಣಹೊಂದಿದನು.

ಆಕಿಲೆಸ್ ಮತ್ತು ಅವನು ಅಜೇಯನೆಂದು ತೋರಿಬರುವ ಚಿತ್ರವು, ಧರ್ಮ ವಿರೋಧಕ್ಕೆ ಒಂದು ತಕ್ಕ ಉದಾಹರಣೆಯಾಗಿದೆ - ದೇವರಿಗೆ, ಸತ್ಯವೇದಕ್ಕೆ ಮತ್ತು ಕ್ರೈಸ್ತ ಧರ್ಮಕ್ಕೆ ವಿರುದ್ಧವಾಗಿಯೂ ಇರುವಂಥದ್ದು. ಧರ್ಮವಿರೋಧಿಯ ಕೆಣಕುವಿಕೆ ಮತ್ತು ಅಪಹಾಸ್ಯ ಅಜೇಯವೆಂದೆನಿಸಬಹುದು, ಆದರೆ ನೈಜವಾಗಿ ಹೇಳುವದಾದರೆ ಅವು ದುರ್ಬಲವಾಗಿರುತ್ತವೆ.

1 ಸಮುವೇಲ 17ರಲ್ಲಿ, ಧರ್ಮವಿರೋಧಿಯ ದುರ್ಬಲತ್ವದ ಉತ್ತಮ ಉದಾಹರಣೆಯಿದೆ. ನಮಗೆ ಗತ್ ಊರಿನ ದೈತ್ಯನನ್ನು ಪರಿಚಯಿಸಲಾಗಿದೆ - ಗೊಲ್ಯಾತ. ಅವನು ಧರ್ಮವಿರೋಧಿಯ ಪ್ರತಿಯೊಂದು ರೂಪವನ್ನು ಮೈವೆತ್ತಿರುತ್ತಾನೆ.

ಮಿಕಮಾಷಿನಲ್ಲಿ ಫಿಲಿಷ್ಟಿಯರಿಗಾದ ಸೋಲು, ಸೌಲನ ಆಳ್ವಿಕೆಯ ಅಂತ್ಯದವರೆಗೂ ಉಳಿದ ವಿರಸವನ್ನು ಹುಟ್ಟುಹಾಕಿತು (14:52). 1 ಸಮುವೇಲ 17ರಲ್ಲಿ, ಪ್ರಮುಖವಾದ ಒಂದು ಕಾಳಗ ಈ ಯುದ್ಧದಲ್ಲಿ ನಡೆಯುತ್ತಿತ್ತು. ಎಲ್ಲಾ ತಗ್ಗಿನಲ್ಲಿ ಇಸ್ರಾಯೇಲ್ಯರು ಫಿಲಿಷ್ಟಿಯರನ್ನು ಎದುರಿಸುವದಕ್ಕೆ ಸಿದ್ಧರಾಗಿದ್ದರು. ನೈಸರ್ಗಿಕ ವ್ಯವಸ್ಥೆಯು ಈ ಕಾಳಗವನ್ನು ವಿಶಿಷ್ಟವನ್ನಾಗಿಸಿತ್ತು. ಆ ತಗ್ಗು ಸುಮಾರು ಒಂದು ಮೈಲು ಅಗಲವಿತ್ತು. ಅದರ ಮಧ್ಯದಲ್ಲಿ, ಕೊರೆಯುವಿಕೆಯಿಂದಾಗಿ ಹನ್ನೆರಡು ಅಡಿ ಆಳ, ಮತ್ತು ಇಪ್ಪತ್ತು ಅಡಿ ಅಗಲದ ಕೊಳ್ಳ ನಿರ್ಮಿತವಾಗಿತ್ತು. ಆ ಕೊಳ್ಳದ ತಳದಲ್ಲಿ ಒಂದು ಚಿಕ್ಕ ಹಳ್ಳ ಬೇಸಿಗೆ ಕಾಲದಲ್ಲಿ ಹರಿಯುತಿತ್ತು. ಅದರಲ್ಲಿ ನುಣ್ಣಗಿನ, ನೀರಿನಿಂದ ಸವೆದ ಕಲ್ಲು ಗಳು ತುಂಬಿದ್ದವು. ಆ ಕೊಳ್ಳದ ರಚನೆ ವಿಚಿತ್ರವಾಗಿದ್ದುದರಿಂದ, ಎರಡೂ ಸೇನೆಗಳು ಒಂದನ್ನೊಂದು ಎದುರಿಸಲು ಸಾಧ್ಯವಿರಲಿಲ್ಲ. ದಾಳಿ ಮಾಡುವ ಸೇನೆಯು ಕೊಳ್ಳದ ಎದುರಿನ ದಂಡೆಯನ್ನು ಏರುವಾಗ ಹತರಾಗುವ ಸಾಧ್ಯತೆ ಬಹಳವಿತ್ತು. ಒಬ್ಬೊಬ್ಬರಾಗಿ ಎದುರಿಸುವದೊಂದೇ ಉತ್ತರವಾಗಿತ್ತು. ನಾಲ್ವತ್ತು ದಿನಗಳವರೆಗೆ ಎರಡು ಸೇನೆಗಳು ತಮ್ಮ ತಮ್ಮ ದಂಡೆಯ ಬದಿಗೆ ನಿಂತುಕೊಂಡು, ಗೊಲ್ಯಾತನ ಸವಾಲನ್ನು ಕೇಳುತ್ತಿದ್ದರು ಮತ್ತು ಹಿಂತಿರುಗುತ್ತಿದ್ದರು. ಇದು ದಿನಕ್ಕೆ ಎರಡಾವರ್ತಿ ಆಗುತ್ತಿತ್ತು (17:16).

ಸಭೆಗೆ ಬೇಕಾಗುವ ಆಹಾರ ಸಾಮಾಗ್ರಿ ಅವರವರ ಮನೆಯಿಂದ ಬರುತ್ತಿತ್ತು, ಇಂಥ ಸಮಯದಲ್ಲಿ ಯೌವನಸ್ಥನಾದ ದಾವೀದ ಘಟನಾ ಸ್ಥಳವನ್ನು ಪ್ರವೇಶಿಸಿದ. ದಾವೀದನು ಬಹುಶಃ ಹದಿನೆಂಟು ವರ್ಷದವನಿರಬೇಕು. ಸೇನೆಯ ಸೇವೆಗೆ ಇನ್ನೂ ಚಿಕ್ಕ ವಯಸ್ಸು

(ಅರಣ್ಯಕಾಂಡ 1:3). ಅವನನ್ನು "ಹುಡುಗ" ಎಂದು ಕರೆಯುತ್ತಿದ್ದರು. ಮದುವೆಯ ವಯಸ್ಸಿಗೆ ಬಂದ ಪೂರ್ಣವಾಗಿ ಬೆಳೆದ ಯೌವನಸ್ಥನನ್ನು ಅದು ಸೂಚಿಸುತ್ತದೆ (17:58). ಇಷಯನು ಅವನನ್ನು ತನ್ನ ಮೂವರು ಸಹೋದರರ ಸುದ್ದಿಯನ್ನು ಕೇಳಿ ಕೊಂಡು ಬರುವಂತೆಯೂ ಆಹಾರದೊಂದಿಗೆ ಕಳುಹಿಸಿದನು.

ಯೌವನದ ಆಸಕ್ತಿ ದಾವೀದನನ್ನು ಇಸ್ರಾಯೇಲ್ಯರ ಪಾಳೆಯಕ್ಕೆ ಬೇಗನೆ ಕರೆತಂದಿತು (17:20), ಆ ದೈತ್ಯನ ಆದಿನದ ಮೊದಲ ಸವಾಲನ್ನು ಕೇಳಿಸಿಕೊಂಡನು. ಗೋಲ್ಯಾತನ ಸವಾಲಿಗೆ ದೊರೆತ ನಿರಸ ಪ್ರತಿಕ್ರಿಯೆಯನ್ನು ನೋಡಿ ಅವನಿಗೆ ಆಶ್ಚರ್ಯವಾಯಿತು. ಗತ್ ಊರಿನ ದೈತ್ಯ ಗೋಲ್ಯಾತನಿಗೆ ಯಾರೂ ಉತ್ತರಿಸದ್ದನ್ನು ಕಂಡು, ದಾವೀದನು ಯುದ್ಧದ ಸ್ತಬ್ಧ ಸ್ಥಿತಿಯ ನಾಲ್ವತ್ತೊಂದನೇಯ ದಿನದಲ್ಲಿ ತಾನು ಉತ್ತರಿಸಲು ನಿರ್ಧಾರ ಮಾಡಿದನು. ಆ ದುರ್ದಿನದಲ್ಲಿ ಹುಡುಗ ದಾವೀದ, ಧರ್ಮವಿರೋಧಿಯ ದುರ್ಬಲ ಸ್ಥಾನವನ್ನು ಗೊತ್ತು ಮಾಡಿಕೊಂಡು ದೇವರಿಗೋಸ್ಕರ ಒಂದು ದೊಡ್ಡ ಜಯವನ್ನು ಸಂಪಾದಿಸಿದನು!

## ಧರ್ಮವಿರೋಧಿಯ ಹೊಗಳುವಿಕೆಯ ಟೊಳ್ಳುತನ

ನಾಲ್ವತ್ತು ದಿನಗಳವರೆಗೆ ಗೋಲ್ಯಾತನು ಅಜೇಯನೆಂದು ತೋಲಿದನು (17:4ff.). ಗೋಲ್ಯಾತನೇ ವಿವಾದವಿಲ್ಲದ "ಸರ್ವಶ್ರೇಷ್ಠನು" ಎಂದು ಕೊಳ್ಳದ ಎರಡೂ ಕಡೆಯದವರಿಗೆ ಒಮ್ಮತದ ಅನಿಸಿಕೆಯಿತ್ತು (17:4, 23). ಯಥಾವತ್ತಾಗಿ ಈ ಬಿರುದು ಯುದ್ಧವನ್ನು ಗೆಲ್ಲುವವನಿಗೆ ಇತ್ತು. ಗೋಲ್ಯಾತನ ಇರುವಿಕೆಯು ಹೃದಯಂಗಮವಾ ಗಿತ್ತು ಮತ್ತು ಅದು ಇಸ್ರಾಯೇಲ್ಯರ ಭಯಕ್ಕೆ ಮೂಲ ಕಾರಣವಾಗಿತ್ತು. ಆ ದೈತ್ಯನು ಒಂಬತ್ತು ಅಡಿಗಿಂತ ಎತ್ತರವಾಗಿದ್ದನು; ಒಬ್ಬ ಸಾಧಾರಣ ಇಸ್ರಾಯೇಲ್ಯನಿಗಿಂತ ಬಹು ಎತ್ತರವಾಗಿದ್ದನು. ಅವನು ಕುಖ್ಯಾತ ಅನಾಕನ ಸಂತತಿಯವರಲ್ಲಿ ಉಳಿದವನು (ಅರಣ್ಯಕಾಂಡ 13:28). ಅವನ ದೈತ್ಯ ಆಕಾರದ ಜೊತೆಗೆ ಅವನು ಧರಿಸಿದ ಶಸ್ತ್ರಗಳು ಜೋಡಿಸಲ್ಪಟ್ಟಿದ್ದವು. ಅದೊಂದೇ ಎರಡು ನೂರು ಪೌಂಡಿಗಿಂತ ಜಾಸ್ತಿ ತೂಕದ್ದಾಗಿತ್ತು. ಅವನ ಪಾದರಕ್ಷೆ ಗಳು ತಾಮ್ರದ್ದಾಗಿತ್ತು. ಬೆನ್ನು ಮೇಲೆ ಹೊತ್ತುಕೊಂಡಿದ್ದ ಈಟಿಯು ಕಂಚಿನದು. ಅವನ ಬರ್ಜಿಯು ಅದ್ಭುತವಾಗಿದ್ದು, ಅದರ ಹಿಡಿಕೆಯು ಕಬ್ಬಿಣದ್ದಾಗಿತ್ತು ಮತ್ತು ಸುಮಾರು ಇಪ್ಪತ್ತೈದು ಪೌಂಡು ತೂಕದ್ದಾಗಿತ್ತು. ಅವನ ಶಿರಸ್ತ್ರಾಣವು ತಾಮ್ರದ್ದಾಗಿತ್ತು. ಒಂದು ದೊಡ್ಡ ಗುರಾಣಿಯು ಅವನ ಮುಂದೆ ಹೊರಲಾಗಿತ್ತು.

ಅವನ ದೈಹಿಕ ದೃಷ್ಯದ ಜೊತೆ ಅವನ ಅಹಂಕಾರವು ಇಸ್ರಾಯೇಲ್ಯರಲ್ಲಿ ಭಯವನ್ನು ಹುಟ್ಟಿಸಿತು (17:10). ಅವನ ಮಾತುಗಳಿಗೆ ಇಸ್ರಯೇಲು ನಡುಗಿತು. ಇತರರಿಗಿಂತ ತಲೆ ಮತ್ತು ಭುಜಕ್ಕಿಂತ ಎತ್ತರವಾಗಿದ್ದ ಅರಸನೂ ಅದರಲ್ಲಿದ್ದನು. ಪ್ರತಿ ಬಾರಿ ಗೊಲ್ಯಾತನು ತನ್ನ ಸವಾಲನ್ನು ಉಚ್ಚರಿಸಿದಾಗ ಇಸ್ರಾಯೇಲ್ಯರ ಹೃದಯದಲ್ಲಿ ಭಯ ಆವರಿಸಿತು.

ಗೋಲ್ಯಾತನ ಟೊಳ್ಳು ಹೊಗಳಿಕೊಳ್ಳುವಿಕೆಯು ದೈವಭಕ್ತರನ್ನು ಎದುರಿಸುತ್ತಿರುವ ನವಯುಗದ ತರ್ಕವಾದಿಗಳಿಗೆ ಸಮಾನವಾಗಿದೆ. ಬೈಬಲ್ ಕೇವಲ ವಸ್ತು ಸಂಗ್ರಹಾಲಯದಲ್ಲಿ ಸಿಕ್ಕುವ ದಿನದವರೆಗೆ ತಾನು ಬದುಕುವದಾಗಿ ಕುಖ್ಯಾತ ವೊಲ್ಟೆ ರನು ಹೊಗಳಿಕೊಂಡನು. ಅವನ ಮರಣದ ನಂತರ ವೊಲ್ಟೆರನ ಮುದ್ರಣಾಲಯವು ಬೈಬಲ್‌ಗಳನ್ನು ಮುದ್ರಿಸಿತು ಮತ್ತು ಅವುಗಳು ಹಂಚಿಕೆಯಾಗುವವರೆಗೆ ಅವನ ಮನೆಯಲ್ಲಿ ಅವುಗಳನ್ನು ಶೇಖರಿಸಿಡಲಾಗಿತ್ತು! ಅಕ್ಟೋಬರ್ 20, 1980ರಲ್ಲಿ, ಟೈಮ್ ಪತ್ರಿಕೆಯಲ್ಲಿ, ಸೃಷ್ಟಿವಾದಿಗಳಿಗೆ ತಮ್ಮ ನಂಬಿಕೆಯನ್ನು ಸಮರ್ಥಿಸುವಂತೆ ಕಾರ್ಲ್ ಸಾಗನ್ ಸವಾಲೆಸೆದರು.[1] ಸವಾಲನ್ನು ಸ್ವೀಕರಿಸಿ ಅವರನ್ನು ಎದುರಿಸಿದಾಗ ಸಾಗನ್ ಪ್ರತಿಕ್ರಿಯೆ ವ್ಯಕ್ತಪಡಿಸಲಿಲ್ಲ![2] ಸಾಗನ್ ಮತ್ತು ಅಂಥ ಕೆಲವರು ದೇವರ ಅಸ್ತಿತ್ವವನ್ನು ಅಲ್ಲಗಳೆಯುತ್ತಾರೆ, ಆದರೆ ಗೋಲ್ಯಾತನ ಮಾತುಗಳಂತೆ, ಅಂಥ ಹೊಗಳುವಿಕೆಯು ಟೊಳ್ಳು!

ಇಂದಿನ ವಿಶ್ವಾಸಿಗಳು ಲಕ್ಷ್ಯಕೊಡಲಿ. ಧರ್ಮವಿರೋಧಿಯ ಹೊಗಳುವಿಕೆಯಲ್ಲಿ ಯಾವ ಹುರುಳಿಲ್ಲ (ಹೋಲಿಸು 2 ಪೇತ್ರ 2:12, 17-19). ಧರ್ಮಶಾಸ್ತ್ರದಲ್ಲಿ ಅದ್ಭುತ ವಾದ ಸಮಸ್ಯೆಗಳಿವೆ ಎಂದು ಕೆಲವರು ವಾದಿಸುತ್ತಾರೆ. ಆದರೆ ಈ ಹೊಗಳುವಿಕೆಗ ಳನ್ನು ಬೆಂಬಲಿಸಲು ವಾಸ್ತವವಾದ ಸಾಕ್ಷಿಗಳು ಎಂದು ಕೆಲವರುವಾದಿಸುತ್ತಾರೆ. ಆದರೆ, ಈ ಸಾಕ್ಷಿಗಳು ಎಂದಿಗು ಇಲ್ಲ! ನಾಸ್ತಿಕತ್ವ, ... ಮತ್ತು ತರ್ಕವಾದದ ಸವಾಲುಗಳು ಕೆಲ ವೊಮ್ಮೆ ಭಾವಪರವಶರನ್ನಾಗಿಸುತ್ತವೆ, ಆದರೆ ಗೊಲ್ಯಾತನಂತೆ, ಧರ್ಮವಿರೋಧವು ಟೊಳ್ಳು ಹೊಗಳುವಿಕೆಯಿಂದ ತುಂಬಿದೆ! (17:49. 50).

## ಸುಲಭವಾಗಿ ಕಾಣುವ ಧರ್ಮವಿರೋಧದ ದುರ್ಬಲತನ

ಗೋಲ್ಯಾತನು ವಿನಾಶಕಾರಿಯೆಂದು ತೋರಿದರೂ, ಅವನಲ್ಲಿ ಮರಣಕರವಾಗಿ ತೋ ರಿದ ಅಕಿಲೆಸ್‌ನ ಹಿಮ್ಮಡಿಯಿತ್ತು. ದಾವೀದನು ಗೋಲ್ಯಾತನನ್ನು ಭೇಟಿಯಾಗಲು ಸೌಲನು ಒಪ್ಪಿಗೆ ಕೊಟ್ಟ ನಂತರ, ತನ್ನ ಯುದ್ಧವಸ್ತ್ರಗಳನ್ನೂ ಆ ಯೌವನಸ್ಥನಿಗೆ ಕೊಡುವದಕ್ಕೆ ಪ್ರಯತ್ನಿಸಿದನು (17:38). ಯುದ್ಧವಸ್ತ್ರಗಳು ಅಂದರೆ ನಿವಾಗಿಯೂ "ಯುದ್ಧವಸ್ತ್ರಗಳೇ," ಯೋಧರು ಧರಿಸುವ ರಕ್ಷಣೆಯ ಕವಚ. ಆದರೆ ದಾವೀದನು "ಕುರುಬರ ವಸ್ತುಗಳನ್ನು" ಬಯಸಿದನು (17:40). ಯಾವ ಕತ್ತಿಯೂ ಅವನ ಕೈಯಲ್ಲಿರಲಿಲ್ಲ; ಯಾವ ಯುದ್ಧವಸ್ತ್ರ ಧರಿಸಲಿಲ್ಲ, ಯಾವ ಆಯುಧವನ್ನು ಹೊತ್ತುಕೊ ಳ್ಳಲಿಲ್ಲ. ಅವನಲ್ಲಿದ್ದದ್ದು ಕೇವಲ ಒಂದು ಕವಣೆ ಮಾತ್ರ. ದೇವರಲ್ಲಿ ಅವನಿಗಿದ್ದ ನಂಬಿಕೆಯೇ ಅವನ ಶ್ರೇಷ್ಠ ಆಯುಧವಾಗಿತ್ತು!

ಎರಡೂ ಸೇನೆಗಳು ತಮ್ಮ ತಮ್ಮ ಸ್ಥಳಗಳಿಗೆ ಆಗಲೇ ತೆರಳಿದ್ದವು. ಕೊಳ್ಳದ ಇಳಿಜಾರಿನಲ್ಲಿ ಇಳಿದು ಬರುತ್ತಿದ್ದ ಹುಡುಗ ದಾವೀದನನ್ನು ಅಲ್ಲಿ ವಿಶ್ರಮಿಸಿಕೊಂಡಿದ್ದ ಅವರು ನೋಡಿದರು. ನಿರ್ಭಯನಾಗಿಯೂ ಮತ್ತು ಶಾಂತತೆಯಿಂದ ಅವನು ಹಳ್ಳದ ಬಳಿಯಲ್ಲಿ ನಿಂತುಕೊಂಡನು ಮತ್ತು ಐದು ನುಣುಪು ಕಲ್ಲುಗಳನ್ನು ಆಯ್ದುಕೊಂಡನು. ಫಿಲಿಷ್ಟಿಯರಿಗೆ ಅಶ್ಚರ್ಯಯುಂಟು ಮಾಡುವಂತೆ, ದಾವೀದನು ಕೊಳ್ಳವನ್ನು ಹತ್ತಿ ಫಿಲಿಷ್ಟಿಯರ ಬದಿಯಲ್ಲಿ ನಿಂತುಕೊಂಡನು! ಗೊಲ್ಯಾತನು ಕುಳಿತುಕೊಂಡಿದ್ದನು. ದಾವೀದನು ತನ್ನ ಸವಾಲಿಗೆ ಉತ್ತರ ಕೊಡುತ್ತಿರುವದನ್ನು ನೋಡಿ, ಬೆದರಿಕೆ ಮತ್ತು ಶಾಪವನ್ನು ಹೇಳುತ್ತಾ ಎದ್ದು ದಾವೀದನೆಡೆಗೆ ಬಂದನು. ದಾವೀದನ ಉತ್ತರದಲ್ಲಿ ಯಾವ ಭಯವಿರಲಿಲ್ಲ, ಕೇವಲ ನಂಬಿಕೆ ಇತ್ತು, ಒಂದೇ ಕಲ್ಲು ಆಯ್ಕೆಯಾಯಿತು, ಮತ್ತು ದೇವರ ಸಹಾಯದಿಂದ ಆ ದೈತ್ಯನು ಬಿದ್ದನು ಮತ್ತು ಅವನ ತಲೆ ಹೊಯ್ಯಲಾಯಿತು!

ಗತ್ ಊರಿನ ದೈತ್ಯ ಮತ್ತು ನವಯುಗದ ಮನುಷ್ಯನ ಮಧ್ಯೆ ಅನೇಕ ಶತಮಾನಗಳು ಗತಿಸಿದರೂ, ಅದೇ ಮುಖ್ಯ ಲಕ್ಷಣಗಳು ಧರ್ಮವಿರೋಧಿಯ ಟೊಳ್ಳುತನವನ್ನು ನಾಶಮಾಡಲು ಒಂದಾಗುತ್ತವೆ. ಗೋಲ್ಯಾತನ ದುರ್ಬಲತನ ಮತ್ತು ಧರ್ಮಿರೋಧಿ ಕಾರ್ಯಗಳು ಈ ಕೆಲವು ಅಂಶಗಳಿಂದ ಸ್ಪಷ್ಟವಾಗುತ್ತದೆ: ದೇವರ ಕುರಿತು ತಿರಸ್ಕಾರ ಮತ್ತು ಅವಹೇಳನಕಾರಿ ಭಾವನೆ (17:43, 45); ರಕ್ಷಣೆಗಾಗಿ ಸ್ವಂತದಲ್ಲಿ ನಂಬಿಕೆ (17:10, 45; ಯೆರೆಮೀಯ 10:23); ಸರಳವಾದ ವಿಷಯಗಳಲ್ಲಿ ಕಂಡುಬರುವ ಅಪಾಯವನ್ನು ಗುರುತಿಸುವಲ್ಲಿ ವೈಪಲ್ಯ (ಉದಾಹರಣೆ 17:43; ಹೋಲಿಸು 1 ಕೊರಿಂಥ 1:27); ಹೆಮ್ಮೆ ಮತ್ತು ಅಹಂಕಾರ (17:44; ಜ್ಞಾನೋಕ್ತಿ 16:18).

## ಧರ್ಮವಿರೋಧದ ಅಂತ್ಯ

ಧರ್ಮವಿರೋಧದ ಸವಾಲನ್ನು ವಿಶ್ವಾಸಿಗಳು ಎದುರಿಸುತ್ತಲೇ ಇರುವರು. ಅದು ಶಿಕ್ಷಕರಿಂದ, ಹತ್ತಿರದ ಸ್ನೇಹಿತರಿಂದ, ಸಹೋದ್ಯೋಗಿಗಳಿಂದ ಅಥವಾ ಕುಟುಂಬ ದವರಿಂದಲೇ ಬರಬಹುದು. ವಿಶ್ವಾಸಿಗಳು ಹಾಸ್ಯಕ್ಕೊಳಗಾಗಿ ಪ್ರಶ್ನಿಸಲ್ಪಡಬಹುದು. ಸೈತಾನನು ತನ್ನ ದಾರಿಯಿಂದ ಹಿಂತೆಗೆಯುವದಿಲ್ಲ (2 ಕೊರಿಂಥ 4:8, 9; 10:3-5). ಸೌಲ ಮತ್ತು

ಇಸ್ರಾಯೇಲ್ಯರಂತೆ ಬಹುಮಂದಿ ಭಕ್ತರಿದ್ದಾರೆ, ಧರ್ಮವಿರೋಧವನ್ನು ಎದುರಿಸುವಾಗ ಭಯ ಪಟ್ಟು ಹಿಂಜರಿಯುತ್ತಾರೆ (17:24). ದಾವೀದನಂತೆ ಕೆಲವು ಭಕ್ತರಿದ್ದಾರೆ. ಅವರು ಹೇಡಿಗಳಾಗಿರುವದಕ್ಕೆ ನಿರಾಕರಿಸುತ್ತಾರೆ (17:36, 48). ಧರ್ಮವಿರೋಧಿ ವೈರಿಯನ್ನು ದೃಢ ನಂಬಿಕೆಯಿಂದ ವಿಶ್ವಾಸಿಗಳು ಎದುರಿಸುವಾಗ ಜಯವು ಖಂಡಿತ! (17:45-51; ಯಾಕೋಬ 4:7).

ನಮ್ಮ ಜೀವನದಲ್ಲಿ ಧರ್ಮವಿರೋಧವನ್ನು ಎದುರಿಸಿ ಜಯಿಸಬೇಕಾದರೆ, ಕೆಳಗೆ ನಮೂದಿಸಿದವುಗಳನ್ನು ಅರ್ಥಮಾಡಿಕೊಳ್ಳಬೇಕು:

ಮೊದಲಿಗೆ, ಧರ್ಮವಿರೋಧವು ತನ್ನ ಸವಾಲುಗಳು ಭಾವಪರವಶವಾಗುವಂತೆ ಮಾಡುತ್ತವೆ ಮತ್ತು ಆ ಸವಾಲುಗಳು ನಮ್ಮ ಹೃದಯದಲ್ಲಿ ಭಯವನ್ನು ಹುಟ್ಟಿಸುವದಕ್ಕೆ ನಿರ್ಮಿತವಾಗಿವೆ (1 ತಿಮೋಥಿ 1:7, 8; ಯೆಹೆಜ್ಕೇಲ 2:6; 3:9; 1 ಕೊರಿಂಥ 16:13; ಫಿಲಿಪ್ಪಿ 1:27, 28).

ಎರಡನೇಯದಾಗಿ ನಾವು ಒಬ್ಬರೇ ಆದರೂ ಕೂಡ ದೇವರಿಗಾಗಿ ಎದ್ದು ನಿಲ್ಲ ಬೇಕು! ದಾವೀದನು ಮೌನವಾಗಿದ್ದ ಬಹುಜನರೊಂದಿಗೆ ನಿಲ್ಲಲು ನಿರಾಕರಿಸಿದನು (17:32). ದೇವರು ತನ್ನೊಂದಿಗಿರುವಷ್ಟು ಸಮಯ ಯುದ್ಧದ ಹೊರೆಯನ್ನು ಹೊತ್ತುಕೊ ಳ್ಳಲು ಸ್ವಸಂತೋಷದಿಂದ ಒಪ್ಪಿದನು (17:37; 1 ಕೊರಿಂಥ 15:58).

ಮೂರನೇಯದಾಗಿ, ಧರ್ಮವಿರೋಧಿಯ ಕೆಣಕುವಿಕೆ ಮತ್ತು ಅಹಂಕಾರವನ್ನು ಜಯಿಸಲು ದೇವರಲ್ಲಿ ಭರವಸೆ ಇಡಬೇಕು (17:37, 47; ಕೀರ್ತನೆ 27:1; 35:1-7; ಯೆಶಾಯ 65:24; 2 ಸಮುವೇಲ 22:1; ಕೀರ್ತನೆ 18:29-35).

ನಾಲ್ಕನೇಯದು, ದೃಢ ವಿಶ್ವಾಸದಿಂದ, ಎಡಬಿಡದೆ ಧರ್ಮವಿರೋಧವನ್ನು ಎದುರಿಸಿದರೆ, ಅದು ಹಿಂದಿರುಗಿ ಓಡಿ ಹೋಗುವುದು! (17:51; ಮತ್ತಾಯ 4:11). ಸೌಲನು ದೇವರನ್ನು ಅವಿಧೇಯತೆಯಿಂದ ಸೇವೆ ಮಾಡಿದ್ದರಿಂದ ಅವನು ಧರ್ಮವಿರೋಧವನ್ನು ಎದುರಿಸುವುದಕ್ಕಾಗಲಿಲ್ಲ. ಗೊಲ್ಯಾತನನ್ನು ಸೋಲಿಸಿದವನಿಗೆ ಸೌಲನು ಬಲಿದಾದ ಭರವಸೆಯನ್ನು ಕೊಡಬಲ್ಲನು (17:25). ಆದರೆ ನಾವು ಸಹಾ, ದಾವೀದನ ಹಾಗೆ, ದೇವರಲ್ಲಿ ವಿಶ್ವಾಸ ಮತ್ತು ಪವಿತ್ರವಾದ ಜೀವನದಿಂದ ಧರ್ಮವಿರೋಧವನ್ನು ಜಯಿಸಬಹುದು. ಪರಲೋಕದ ತಂದೆಯಲ್ಲಿ ವಿಶ್ವಾಸವನ್ನು ಯಿಟ್ಟ ಅತ್ಯಂತ ಬಳಹೀನನಾದ ದೇವರ ಮಗು ಲೋಕವನ್ನು ಜಯಿಸಬಲ್ಲ ಬಲಶಾಲಿಯಾಗಿರುವನು! (ಯೋಹಾನ 16:33).

## ಮುಕ್ತಾಯ

ನಮ್ಮ ಸಮಯದ ಅನೇಕ ಜನರಂತೆ ಗೋಲ್ಯಾತನಿರುವದು ಎಷ್ಟು ಆಶ್ಚರ್ಯಕರವಲ್ಲವೋ? ಧರ್ಮವಿರೋಧಿಗಳಾಗಿರುವರನ್ನು ಸಂಕ್ಷಿಪ್ತವಾಗಿ ಸೂಚಿಸುತ್ತಾನೆ. ಆ ಯುದ್ಧವನ್ನು ಗೆಲ್ಲುವಲ್ಲಿ ಅವನು ವಿಫಲವಾದದ್ದು, ಕ್ರಿಸ್ತನೊಬ್ಬನೇ ಮಾರ್ಗವೆಂದು ಸೂಚಿಸುತ್ತದೆ! ನಾವು ದಾವೀದನ ನಂಬಿಕೆಯನ್ನು ಹಿಂಬಾಲಿಸಿ ಧರ್ಮವಿರೋಧವನ್ನು ಜಯಿಸೋಣ.

ಕರ್ನಲ್ ಎಥನ್ ಆಲನ್, ಗ್ರೀನ್ ಮೌಂಟ್ಸನ್ ಬಾಯ್ಸ್‌ನ ನಾಯಕ, ಒಬ್ಬ ಭಯಕಂರ ನಾಸ್ತಿಕನಾಗಿದ್ದನು. ಅವರ ಹೆಂಡತಿಯು ಒಬ್ಬ ಭಕ್ತಿವಂತ ಸ್ತ್ರೀಯಾಗಿದ್ದು ತಮ್ಮ ಮಗಳಿಗೆ ಸುವಾರ್ತೆಯನ್ನು ತಿಳಿಸಿಕೊಡುತ್ತಿದ್ದರು. ಅವರ ಮಗಳು ಅಸ್ವಸ್ಥಳಾದಳು, ಅವಳ ಕೊನೆಯ ಮಾತುಗಳನ್ನು ಕೇಳಿಸಿಕೊಳ್ಳುವಂತೆ ಅವಳ ತಂದೆಯನ್ನು ಬರಹೇಳಿದರು. "ಅಪ್ಪಾ, ನಾನು ಇನ್ನು ಸಾಯುತ್ತೇನೆ. ನೀವು ಕಲಿಸಿಕೊಟ್ಟ ತತ್ವಗಳನ್ನು ನಾನು ನಂಬಲೋ ಅಥವಾ ತಾಯಿ ಹೇಳಿಕೊಟ್ಟದ್ದನೋ?" ಎಂದು ಕೇಳಿದಳು. ತನ್ನ ಭಾವನೆಗಳ ಮೇಲೆ ನಿಯಂತ್ರಣ ತಂದುಕೊಳ್ಳಲು ಸ್ವಲ್ಪ ಸಮಯ ತೆಗೆದುಕೊಂಡು, ಅವರು ಹೀಗೆ ಉತ್ತರಿಸಿದರು, "ನಿನ್ನ ತಾಯಿ ಹೇಳಿಕೊಟ್ಟದ್ದನ್ನು ನಂಬು." ಧರ್ಮವಿರೋ

ಧದ ನಿರ್ಬಲಾವಸ್ಥೆ ಸ್ಪಷ್ಟವಾಗಿದೆ. ಸುವಾರ್ತೆಯ ಆಜ್ಞೆಗಳಿಗೆ ವಿಧೇಯರಾಗುವದಕ್ಕೆ ಯಾರಾದರೂ ಯಾಕೆ ನಿರಾಕರಿಸಬೇಕು?

---

ಟಿಪ್ಪಣಿಗಳು

[1]Frederic Golden, "The Cosmic Explainer," *Time*, 20 October 1980, p. 63. [2]Thomas B. Warren, "Will Prof. Carl Sagan Face Up to an Acceptance of His 'Open Challenge' to Biblical Creationists?" *Spiritual Sword,* October 1981, pp. 28-31.